ದಿನಾಂಕಃ **09.12.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀ **SNM** ವಕೀಲರಿಂದಃ</u>

ನಾನು ಶಾಲೆಗೆ ಹೋಗಿರುತ್ತೇನೆ ಆದರೆ ಓದಲು ಬರೆಯಲು ಬರುವುದಿಲ್ಲ, ಸಹಿ ಮಾತ್ರ ಮಾಡುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ನನಗೆ ಗೊತ್ತಿದೆ. ನನ್ನ ತಂದೆ ತಾಯಿಯ ಬಳಿ ನನ್ನ ಸಹೋದರರ ಹೆಂಡತಿ ಮಕ್ಕಳು ದಾಖಲೆ ಬರೆಸಿಕೊಂಡಿದ್ದು ಆ ಸಮಯದಲ್ಲಿ ಅವರಿಗೆ ನೆನಪಿನ ಶಕ್ತಿ ಇರಲಿಲ್ಲ ಎಂದು ಹೇಳಿರುತ್ತೇನೆ. ನನ್ನ ಮದುವೆ ಆಗಿ ಸುಮಾರು **40** ವರ್ಷಗಳು ಆಗಿರಬಹುದು. ಆಸ್ತಿಗಳ ರೆವಿನ್ಯೂ ದಾಖಲೆಗಳು ನನ್ನ ತಂದೆ ತಾಯಿ ಹೆಸರಿನಲ್ಲಿ ಇತ್ತು ಎಂದರೆ ಸರಿ. ಅವರೇ ಸಂಪಾದನೆ ಮಾಡಿರುವ ಆಸ್ತಿ ಎಂದರೆ ಸರಿ, ದೊಡ್ಡಪ್ಪ ಸಹ ಮಾಡಿರುತ್ತಾರೆ. ನನ್ನನ್ನು ಸಾರವಾಟಪುರಕ್ಕೆ ಮದುವೆ ಮಾಡಿ ಕೊಟಟಿದ್ದರು. ಹನುಮಂತನಹಳ್ಳಿಯಿಂದ ಸಾರವಾಟಪುರಕ್ಕೆ ಸುಮಾರು **3-4** ಕಿ.ಮೀ ದೂರ ಎಂದರೆ ಸರಿ.

**3** ನೇ ಪ್ರತಿವಾದಿಯ ಹೆಂಡತಿ ಮತ್ತು ಮಗ ತಮ್ಮ ಹೆಸರಿಗೆ ದಾಖಲೆ ಮಾಡಿಸಿಕೊಂಡಿರುವುದನ್ನು ನಾನು ನೋಡಿರುವುದಿಲ್ಲ. ನಾನು ಪತ್ರ ಮಾಡಿಸಿಕೊಂಡ ಮಾರನೆ ದಿನವೇ ನನ್ನ ತಂದೆ ತಾಯಿಯನ್ನು ಈ ಬಗ್ಗೆ ಕೇಳಿದಾಗ ಸದರಿ ಪತ್ರ ಮಾಡಿಕೊಟ್ಟಿರುವ ಬಗ್ಗೆ ನಮಗೆ ಗೊತ್ತಿಲ್ಲ ಎಂದು ನನಗೆ ಹೇಳಿರುತ್ತಾರೆ. ನನಗೂ ಜಮೀನಿನಲ್ಲಿ ಭಾಗ ಇದೆ ಮತ್ತು ನನಗೆ ಭಾಗ ಬೇಕು. ನನಗೆ ಭಾಗ ಬೇಕು ಎಂದು ದಾವೆಯನ್ನು ಹೂಡಿರುತ್ತೇನೆ. ನಾನು ಭಾಗ ಕೇಳಲು ಹೋದಾಗ **3** ನೇ ಪ್ರತಿವಾದಿ ನನ್ನನ್ನು ಮನೆಯಿಂದ ಹೊರಹಾಕಿರುತ್ತಾರೆ ಎಂದು ಈ ಮುಂಚೆ ನ್ಯಾಯಾಲಯದ ಗಮನಕ್ಕೆ ತಂದಿರುತ್ತೇನೆ. ಹನಮಂತರಾಯಪ್ಪ ರವರನ್ನು **3** ನೇ ಪ್ರತಿವಾದಿ ಕೇಳಿಕೊಂಡರು ಸಹ ಅವರು ವಿಭಾಗ ಮಾಡಿಕೊಳ್ಳಲು ಬಂದಿರುವುದಿಲ್ಲ ಅದ ಕಾರಣ ನನ್ನ ತಂದೆ ತಾಯಿ ಪತ್ರ

ಬರೆದಿರುತ್ತಾರೆ ಎಂದರೆ ಸರಿಯಲ್ಲ. ಪತ್ರ ಬರೆದುಕೊಟ್ಟ ಜಮೀನುಗಳನ್ನು ಹೊರತುಪಡಿಸಿ ಉಳಿದ ಜಮೀನುಗಳಲ್ಲಿ ಮಾತ್ರ ವಿಭಾಗದ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ಸಾಧ್ಯವಾದರೆ ಆಸ್ತಿ ಕಬಳಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ